ಇಂದು ದಿನಾಂಕ:14.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಆರೋಪಿತರ ಪರ ಶ್ರೀ ಜಿಡಿ ವಕೀಲರಿಂದ:

1. ನಾನು 2012 ರಿಂದ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿತರು ಮತ್ತು ಅರಣ್ಯ ಇಲಾಖೆಯ ನಡುವೆ ಈ ಹಿಂದೆ ನಡೆದಿದ್ದ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ.23 ಒಟ್ಟು 509.34 ಗುಂಟೆ ಇರುತ್ತದೆ. ಅದರಲ್ಲಿ ಹಿಡುವಳಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಇಲಾಖೆಯಿಂದ ಅರಣ್ಯಗಳಿಗೆ ಗಸ್ತು ಕರ್ತವ್ಯಕ್ಕೆ ಹೋಗುತ್ತೇವೆ ಎಂದರೆ ಸರಿ. ಸರ್ವೆ ನಂ.23 ರಲ್ಲಿ ನಮ್ಮ ಅರಣ್ಯ ಇರುವ ಪ್ರದೇಶಗಳಲ್ಲಿ ಗಸ್ತು ಕರ್ತವ್ಯಕ್ಕೆ ಹೋಗುತ್ತಿದ್ದೆವು. ಸದರಿ ಪ್ರದೇಶದಲ್ಲಿ ಗಸ್ತು ಕರ್ತವ್ಯಕ್ಕೆ ಹಲವಾರು ಬಾರಿ ಹೋಗಿದ್ದೇವೆ, ಆದರೆ ದಿನಾಂಕ ಹೇಳಲಾಗುವುದಿಲ್ಲ. ಮರಗಳನ್ನು ಸಾಯಿಸಿರುವುದು ದಿನಾಂಕ:12.03.2015 ರಂದು ನಮಗೆ ಕಂಡುಬಂದಿರುತ್ತದೆ. ಸರ್ವೆ ಮಾಡಲು ಅಕ್ಕಪಕ್ಕದವರಿಗೆ ನೋಟಿಸು ನೀಡಿಲ್ಲ. ಸದರಿ ಮರಗಳನ್ನು ಯಾರು ಸಾಯಿಸಿದ್ದು ಎಂದು ನಾವು ಖುದ್ದಾಗಿ ನೋಡಿಲ್ಲ, ಆದರೆ ಮರಗಚ್ಚು ಮಾಡಿರುವುದರಿಂದ ಸತ್ತಿರುವುದು ಕಂಡುಬಂದಿರುತ್ತದೆ.

2. ಸರ್ವೆ ಮಾಡಿದ ದಿನಾಂಕ ನನಗೆ ನೆನಪಿಲ್ಲ. ನಾನು ಮತ್ತು ಚಾಸಾ 1 ಸರ್ವೆ ನಂ.23 ಕ್ಕೆ ಭೇಟಿ ನೀಡಿದಾಗ ಮರಗಳು ಸತ್ತುಹೋಗಿರುವುದು ಕಂಡುಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳಕ್ಕೆ ಭೇಟಿ ನೀಡಿದ ನಂತರ ಸತ್ತು ಹೋದ ಮರಗಳು ಯಾವ ಸರ್ವೆ ನಂಬರ್ ಗೆ ಬರುತ್ತವೆ ಎಂದು ಸರ್ವೆ ಮಾಡಿರುತ್ತೇವೆ. ಆ ರೀತಿ ಸರ್ವೆ ಮಾಡಿದ ದಿನಾಂಕ ಮತ್ತು ಮಾಡಿದವರ ಹೆಸರು ನನಗೆ ಗೊತ್ತಿಲ್ಲ. ಸರ್ವೆ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

C/c ಎ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ